ದಿ: 20-02-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

5. ಈಗ ನನಗೆ ತೋರಿಸಿದ ನಿಪಿ-6 ಮತ್ತು 7 ರಲ್ಲಿ ನಾನು ಇದ್ದೇನೆ. ಈ ಪೋಟೋಗಳನ್ನು ನಮ್ಮ ಮನೆಯ ಬಳಿ ತೆಗೆದಿದ್ದಾರೆ. ಈ ಪೋಟೋಗಳಲ್ಲಿ ಕಾಣಿಸಿರುವ ಮೃತ ದೇಹ ನನ್ನ ಗಂಡನದ್ದು ಇರುತ್ತದೆ. ಆ ದಿನ ವಿಚಾರಣೆ ಮಾಡಲಾಗಿತ್ತು. ಆಗ ನನ್ನ ಗಂಡನ ದುಡ್ಡು ಕೊಡುವ ವಿಚಾರದ ಹಿನ್ನಲೆಯಲ್ಲಿ ಬಹಳ ಹಿಂಸೆ ನೀಡುತ್ತಿದ್ದರು, ಆದ್ದರಿಂದ ಅವರು ನೇಣು ಹಾಕಿಕೊಂಡಿದ್ದಾರೆ ಅಂತ ಗೊತ್ತಾಯಿತು. ಈಗ ನನಗೆ ತೋರಿಸಿದ 02 ಪೋಟೋಗಳಲ್ಲಿ ನಾನು ಇದ್ದೇನೆ. ಅದರಲ್ಲಿ ನನ್ನ ಗಂಡನಿಗೆ ಸಂಬಂಧಿಸಿದ ಮೊಬೈಲ್ ನ್ನು ಹಾಜರುಪಡಿಸಿರುತ್ತೇನೆ. ಆ 02 ಪೋಟೋಗಳನ್ನು ನಿಪಿ-8 ಮತ್ತು 9 ಗುರುತಿಸಲಾಯಿತು. ಆ ಸಮಯದಲ್ಲಿ ಒಂದು ಪಂಚನಾಮೆಯನ್ನು ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಆ ಮೊಬೈಲ್ ನ್ನು ಈಗ ನೋಡಿ ಗುರುತಿಸುತ್ತೇನೆ. ಮೊಬೈಲ್ ನ್ನು ಮು.ಮಾ.3 ಅಂತ ಗುರುತಿಸಲಾಯಿತು.

6. ಈಗ ನನಗೆ ತೋರಿಸಿದ ಪೋಟೋಗಳನ್ನು ಆರೋಪಿತರ ಮನೆಯ ಬಳಿ ತೆಗೆದಿರುತ್ತಾರೆ. ಆ ಎರಡು ಪೋಟೋಗಳನ್ನು ನಿಪಿ-10 ಮತ್ತು 11 ಅಂತ ಗುರುತಿಸಲಾಯಿತು. ಹೊಡೆದಂತಹ ಜಾಗವನ್ನು ನಾನು ಪೊಲೀಸರಿಗೆ ತೋರಿಸಿದ್ದೆ, ಅದನ್ನು ಪರಿಶೀಲನೆ ಮಾಡಿ ಪೊಲೀಸರು ಪಂಚನಾಮೆ ಮಾಡಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿದಾರರು ದಾಖಲೆ ನೋಡಿ ಗುರುತಿಸುತ್ತಾರೆ. ಸದರಿ ದಾಖಲೆ ದಿಃ 17-04-2017 ರಂದು ಮಾಡಿದ ಮಹಜರ ಇರುತ್ತದೆ. ಮಹಜರನ್ನು ನಿಪಿ-12 ಅಂತ, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಅಂತ ಗುರುತಿಸಲಾಯಿತು.

(ಈ ಹಂತದಲ್ಲಿ ಮೂಲ ಪಂಚನಾಮೆಗಳು ಕಡತದಲ್ಲಿ ಲಭ್ಯ ಇರುವುದಿಲ್ಲ ಆದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.